(ಎ) ರಾಷ್ಟ್ರೀಯ ಭದ್ರತಾ ಯೋಜನೆ ಬಗ್ಗೆ

ಶ್ರೀ ಧ್ರುವನಾರಾಯಣ್ (ಸಂತೇಮಾರನಹಳ್ಳಿ) : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಭದ್ರತಾ ಯೋಜನೆಯಡಿ ತಲಾ ಹತ್ತು ಸಾವಿರ ರೂಪಾಯಿಗಳಂತೆ ಇದುವರೆಗೂ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಸರ್ಕಾರ ಮರುಪಾವತಿಸಬೇಕಾಗಿದೆ. 2002 ರಿಂದ 2004ರವರೆಗೆ ಇದುವರೆಗೆ ಸುಮಾರು 1250 ಪ್ರಕರಣಗಳಲ್ಲಿ 1 ಕೋಟಿ 25 ಲಕ್ಷ ರೂಪಾಯಿಗಳು ಮರುಪಾವತಿಯಾಗಬೇಕಾಗಿದೆ. ಸರ್ಕಾರದಿಂದ ಸದರಿ ಯೋಜನೆಯಡಿಯಲ್ಲಿ ಒದಗಿಸಬೇಕಾದ ನೆರವನ್ನು ತಕ್ಷಣ ಒದಗಿಸಿಕೊಡಬೇಕೆಂದು ಸರ್ಕಾರದ ಮೊರೆ ಹೋಗುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಶ್ನೋತ್ತರ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಸರ್ಕಾರ ಇದರ ಬಗ್ಗೆ ಖಂಡಿತವಾಗಿಯೂ ಗಮನಹರಿಸಿ ಅವರಿಗೆ ಸರಿಯಾದ ಉತ್ತರ ಕಳುಹಿಸಿಕೊಡುತ್ತದೆ.

ಅಧ್ಯಕ್ಷರು : ಈಗ ಮುಂದಿನ ವಿಚಾರಕ್ಕೆ ಹೋಗೋಣ.

(ಹುಲವಾರು ಮಾನ್ಯ ಸದಸ್ಯರುಗಳು ವಿಷಯ ಪ್ರಸ್ತಾಪಿಸಲು ತಮಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಒಟ್ಟಿಗೆ ಎದ್ದು ನಿಂತು ಅಧ್ಯಕ್ಷರನ್ನು ಕೋರುತ್ತಿದ್ದರು)

ಅಧ್ಯಕ್ಷರು : ಒಂದು ವಿಚಾರವನ್ನು ಮಾನ್ಯ ಸದಸ್ಯರುಗಳು ಅರ್ಥ ಮಾಡಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಮ್ಮ ಕಾರ್ಯಾಲಯಕ್ಕೆ ಬಂದು ತಮ್ಮನ್ನು ಕಾಡಿ, ಬೇಡಿ ವಿಷಯ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೇಳಿದಾಗ ಅವಕಾಶ ಕೊಡುವುದಾಗಿ ಹೇಳಿದ್ದಿರಿ.

ಅಧ್ಯಕ್ಷರು : ತಾವು ಆ ವಿಷಯವನ್ನು ಪದೇ ಪದೇ ಪ್ರಸ್ತಾಪಿಸುತ್ತಿದ್ದೀರಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅಧ್ಯಕ್ಷರೆ, ದಿವಸಕ್ಕೊಂದು ಸಲ ವಾಟಾಳ್ ನಾಗರಾಜ್‌ರಿಗೆ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ?

(ಏ) ಗೋವಾದಲ್ಲಿ ನಿರಾಶ್ರಿತ ಕನ್ನಡಿಗರಿಗೆ ಅಕ್ಕಿ, ಪಾತ್ರೆ ಇತ್ಯಾದಿ ಸರಬರಾಜು ಮಾಡುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಗೋವಾದಲ್ಲಿರುವ ನಿರಾಶ್ರಿತ ಕನ್ನಡಿಗರಿಗೆ ನಮ್ಮ ಪಕ್ಷದವರು ಇಲ್ಲಿಂದ ಅಕ್ಕಿ, ಪಾತ್ರೆ ಇನ್ನಿತರ ಅಗತ್ಯ ವಸ್ತುಗಳೆಲ್ಲವನ್ನೂ ತೆಗೆದುಕೊಂಡು ಅವರಿಗೆ ತಲುಪಿಸಬೇಕೆಂದು ಹೊರಟಾಗ ರಾಜ್ಯದ ಗೋವಾ ಗಡಿಯಲ್ಲಿ ಪೊಲೀಸ್ ಅವರನ್ನು ತಡೆಹಿಡಿಯುವ ಮೂಲಕ ಹೊರಗಡೆ ಕಳುಹಿಸಿದರು. 'ನಾವು ಅವರಿಗಾಗಿ ಅಕ್ಕಿ, ಪಾತ್ರೆ ತೆಗೆದುಕೊಂಡು ಹೋಗುತ್ತಿದ್ದೇವೆ' ಎಂದು ಅವರು ಕಾಡಿ, ಬೇಡುತ್ತಿದ್ದರೂ, 'ಇಲ್ಲ. ಸಾಧ್ಯವಿಲ್ಲ. ನಿಮ್ಮನ್ನು ರಾಜ್ಯದೊಳಗೆ ಬಿಡುವುದಿಲ್ಲ' ಎಂದು ತಡೆಹಿಡಿದು ನಿರಂತರವಾಗಿ ಅವರಿಗೆ ತೊಂದರೆ ಕೊಟ್ಟು ಪೊಲೀಸರ ದೊಡ್ಡ ಕಾವಲನ್ನು ಹಾಕಿ ಅವರುಗಳನ್ನು ಚಾಮರಾಜನಗರಕ್ಕೆ ಹಿಂದಕ್ಕೆ ಕಳುಹಿಸಿದರು. ಗೋವಾ ರಾಜ್ಯವೇನು ಪೋರ್ಚುಗೀಸರ ರಾಜ್ಯವೇ ಅಥವಾ ಬೇರೆ ದೇಶವೇ? ಅಲ್ಲಿನ ಪರಿಸ್ಥಿತಿ ಆ ರೀತಿ ಇರುವಾಗ ಕನ್ನಡಿಗರ ಸಮಸ್ಯೆ ಆಲಿಸಲು ತೆರಳಿದ್ದ ಕರ್ನಾಟಕ ಸರ್ಕಾರದ ನಿಯೋಗದ ಪ್ರಯತ್ನವೂ ವಿಫಲವಾಯಿತು. ಅಲ್ಲಿ ಕನ್ನಡಿಗರನ್ನು ಕೇಳುವವರೇ ಗತಿಯಿಲ್ಲ. ರಾಜ್ಯದಿಂದ ಅಲ್ಲಿನ ಗೃಹ

ವಿಫಲವಾಯಿತು. ಅಲ್ಲಿ ಕನ್ನಡಿಗರನ್ನು ಕೇಳುವವರೇ ಗತಿಯಿಲ್ಲ. ರಾಜ್ಯದಿಂದ ಅಲ್ಲಿನ ಗೃಹ ಸಚಿವರಿಗೆ ಮನವಿ ಅರ್ಪಿಸಿದರೂ ಸಫಲವಾಗಲಿಲ್ಲ. ಇದೊಂದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆಯಾಗಿದೆ.

ಎರಡನೆಯದಾಗಿ, ನಿನ್ನೆ ದಿವಸ ಬೆಂಗಳೂರು ನಗರದಲ್ಲಿ ರಾಷ್ಟ್ರೀಯ ತಮಿಳು ವಿಮೋಚನಾದವರೆಲ್ಲರೂ ಸೇರಿ, ಈ ದೇಶವನ್ನು ವಿಭಜನೆ ಮಾಡತಕ್ಕಂಥವರು, ದೇಶವನ್ನು ಒಡೆಯತಕ್ಕಂಥವರು, ಇಂತಹ ತಮಿಳು ಸಮ್ಮೇಳನ ಜರುಗಿಸುವ ಮೂಲಕ ಇಲ್ಲೆಲ್ಲಾ ಬಂದು ಬೆಂಗಳೂರನ್ನು ನಾಶಪಡಿಸಿ ಬೆಂಗಳೂರನ್ನು ತಮಿಳುನಾಡನ್ನಾಗಿ ಮಾಡುವ ರೀತಿಯಲ್ಲಿ ಹೊರಟಿರುವುದು ಮತ್ತು ಇದನ್ನು ತಡೆಯಲು ಹೋದ ಕನ್ನಡಿಗರ ಮೇಲೆ ಹಲ್ಲೆ ನಡೆಸಿರುವುದು! ಇವೆಲ್ಲವೂ ನಡೆದಿರುವುದು ಬೆಂಗಳೂರಿನಲ್ಲೇ!! ಬೆಂಗಳೂರು ನಗರ ತಮಿಳುನಾಡಿನ ರಾಜಧಾನಿಯಲ್ಲ. 'ಬೆಂಗಳೂರು ನಗರವನ್ನು ತಮಿಳರ ವಾಸಿಸುವುದಕ್ಕೆ ನಾವು ಕೊಟ್ಟಿದ್ದೇವೆ' ಎನ್ನುವ ತೀರ್ಮಾನವಾಗಿದ್ದರೆ ಸರ್ಕಾರ ಹೇಳಲಿ. ಇಲ್ಲದಿದ್ದರೆ, ನಿನ್ನೆ ಬಂದಂಥ ನಡುಮಾರನ್ ಅವರನ್ನು ಸರ್ಕಾರ ಬಂಧಿಸಬೇಕಾಗಿತ್ತು. ಇದು ನಿಜವಾಗಿಯೂ ಅಕ್ಷಮ್ಯ ಅಪರಾಧ. ಗೋವಾದಲ್ಲಿನ ನಿರಾಶ್ರಿತ ಕನ್ನಡಿಗರ ಬಗ್ಗೆ ಹಾಗೂ ಬೆಂಗಳೂರಿನಲ್ಲಿ ತಮಿಳರ ಸಮ್ಮೇಳನ ನಡೆಸಿದ ಬಗ್ಗೆ ಸರ್ಕಾರ ಏನು ಹೇಳುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಭಾರತ ದೇಶದ ಪ್ರಜೆ ಕಾಶ್ಮೀರವೊಂದನ್ನು ಹೊರತುಪಡಿಸಿ, ಉಳಿದ ಯಾವುದೇ ರಾಜ್ಯಗಳಿಗೂ ಕೂಡ ತೆರಳಿ ಮುಕ್ತವಾಗಿ ಸಂಚರಿಸಲು, ಹೋಗಿ ಬರಲು ಮತ್ತು ಅಲ್ಲಿ ವಾಸಿಸುವುದಕ್ಕೆ ಅಧಿಕಾರವಿದೆ. ಅಂದರೆ, ಆಸ್ತಿ ತೆಗೆದುಕೊಳ್ಳಲು ಉಳಿದ ರಾಜ್ಯಗಳಲ್ಲಿರುವಂತೆ ಕಾಶ್ಮೀರದಲ್ಲಿ ಸಾಧ್ಯವಿಲ್ಲ. ಸಂವಿಧಾನದಲ್ಲಿ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿಕೊಡಲಾಗಿದೆ. ಉಳಿದ ರಾಜ್ಯಗಳಿಗೆ ತೆರಳಬೇಕಾದರೆ, ಅಲ್ಲಿ ಭಾಷಾ ಅಲ್ಪಸಂಖ್ಯಾತರಿರಬಹುದು, ಅಥವಾ ದುಡಿಯುವ ವರ್ಗದ ಜನರಾಗಿರಬಹುದು, ಅವರೆಲ್ಲರ ಮೇಲೆ ಹಲ್ಲೆ ನಡೆಸಿರುವ ಪ್ರಕರಣವನ್ನು ಸರ್ಕಾರ ಖಂಡಿಸುತ್ತದೆ. ಗೋವಾದಲ್ಲಿನ ನಿರಾಶ್ರಿತ ಕನ್ನಡಿಗರಿಗೆ ಅನುಕೂಲ ಕಲ್ಪಿಸಲು ಕೆಲವು ಸಂಘಟನೆಗಳು ತೆರಳಿದ ಸಂದರ್ಭದಲ್ಲಿ ಅವರನ್ನು ತಡೆಹಿಡಿದಿರುವ ವರದಿಗಳು ಪತ್ರಿಕೆಗಳಲ್ಲೂ ಕೂಡ ಬಂದಿದೆ.

ಅದರ ಬಗ್ಗೆ ಕೂಡ ಕ್ರಮಕೈಗೊಳ್ಳುತ್ತಿದ್ದೇವೆ. ನಮ್ಮ ಮುಖ್ಯಮಂತ್ರಿಯವರು ಈಗಾಗಲೇ ಕೇಂದ್ರ ಸರ್ಕಾರದ ಗಮನವನ್ನು ಕೂಡ ಸೆಳೆದಿದ್ದಾರೆ. ಅದರ ಜೊತೆಗೆ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ನಮ್ಮ ರಾಜ್ಯ ಸರ್ಕಾರದ ಪರವಾಗಿ ಬೈನಾಬೀಚಿಗೆ ಹೋಗಿ ಗೋವಾದಲ್ಲಿರುವ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿ ಅಲ್ಲಿರುವ ಸಂಕಷ್ಟಗಳನ್ನೆಲ್ಲಾ ಹೇಳಿಕೊಟ್ಟಿರುವುದು ತಮಗೆ ಗೊತ್ತಿದೆ. ಆ ರೀತಿ ಹೇಳಿ ಬಂದಾದ ನಂತರ ಅವರು ಯಾವುದೇ ಕ್ರಮವನ್ನು ಕೈಗೊಳ್ಳದಿದ್ದ ಕಾರಣಕ್ಕಾಗಿಯೇ ಕೇಂದ್ರದ ಮಾನ್ಯ ಗೃಹ ಸಚಿವರನ್ನು ಭೇಟಿ ಮಾಡಿ ಅಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿ ಕನ್ನಡಿಗರು ಅನುಭವಿಸುತ್ತಿರತಕ್ಕ ಸಂಕಷ್ಟವನ್ನು ಹೇಳಿದ್ದಾರೆ. ಅವರು ಪತ್ರಿಕೆಯಲ್ಲಿ ಅದು ಒಂದು ಕೆಂಪು ದ್ವೀಪ, ಅಥವಾ ಕೆಂಪು ಪ್ರದೇಶ, ಅಲ್ಲಿ ಅನೈತಿಕ ಚಟುವಟಿಕೆಗಳನ್ನು ನಡೆಯುತ್ತಿದ್ದವು ಆ ಕಾರಣಕ್ಕಾಗಿ ಮಾಡಿದ್ದೇವೆ, ಸರ್ವೋಚ್ಚ ನ್ಯಾಯಾಲಯವು ಕೊಟ್ಟಿರುವ ತೀರ್ಪಿನ ಮೂಲಕ ಇದನ್ನು ಮಾಡಿದ್ದೇವೆ ಎನ್ನುವಂಥ ಸಬೂಬುಗಳನ್ನು ಹೇಳುತ್ತಿದ್ದಾರೆ. ಅದು ಒಂದು ನೆಪ ಮಾತ್ರ. ಎಷ್ಟು ಅಗತ್ಯವಿತ್ತೋ ಅಷ್ಟನ್ನು ಬಿಟ್ಟು ಉಳಿದಿರತಕ್ಕಂಥ ಎಲ್ಲಾ ಪ್ರದೇಶದಲ್ಲಿ ದುಡಿಯುವ ಜನವರ್ಗದ

ನಮ್ಮ ಸರ್ಕಾರ ಖಂಡಿಸುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರವನ್ನು ಮಾನ್ಯ ಪ್ರಧಾನ ಮಂತ್ರಿಯವರ ಮತ್ತು ಗೃಹ ಸಚಿವರ ಗಮನಕ್ಕೆ ತಂದಿದ್ದಾರೆ. ಅವರ ಜೊತೆಗೂ ಮಾತನಾಡಿದ್ದಾರೆ. ನಾವು ನಿಮ್ಮೊಟ್ಟಿಗೆ ಇದ್ದೇವೆ, ನೀವು ನಮ್ಮೊಟ್ಟಿಗೆ ಇದ್ದೀರಿ, ಈ ಸರ್ಕಾರ ಕನ್ನಡಿಗರು ಅಥವಾ ಭಾರತ ದೇಶದ ಯಾವುದೇ ಜನಕ್ಕೆ ಈ ರೀತಿ ವಿನಾಕಾರಣ ತೊಂದರೆಯಾಗಿರತಕ್ಕ ಸಂದರ್ಭ ಬಂದಾಗ ಅದರ ಪರವಾಗಿ ನಾವು ನಿಲ್ಲುತ್ತೇವೆ, ಅದನ್ನು ಎದುರಿಸುತ್ತೇವೆ, ನಮ್ಮ ಕಾನೂನಿನ ಮತ್ತು ಸಂವಿಧಾನ ಚೌಕಟ್ಟಿನಲ್ಲಿ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳತಕ್ಕ ಪ್ರಯತ್ನವನ್ನೂ ಮಾಡುತ್ತೇವೆ. ಎರಡನೆಯದಾಗಿ ತಾವು ಇಲ್ಲಿ ವಿಶ್ವ ತಮಿಳು ಸಮ್ಮೇಳನವನ್ನು ಮಾಡಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ವಿಶ್ವ ತಮಿಳರ ಸಮ್ಮೇಳನವನ್ನು ಮಾಡುವುದಕ್ಕೆ ಯಾರೂ ಆಕ್ಷೇಪಣೆ ಮಾಡಬೇಕಾಗಿಲ್ಲ. ಆದರೆ ಅವರು ಅದನ್ನು ತಮಿಳೀಕರಿಸಿ ಅದಕ್ಕೆ ಬೇರೆ ಬೇರೆಯಾಗಿರತಕ್ಕಂಥ ಉಗ್ರವಾದಿಗಳ ಜೊತೆಗೆ ಸಂಪರ್ಕವನ್ನು ಇಟ್ಟುಕೊಂಡಿರುವ ವ್ಯಕ್ತಿಗಳ ವಿಷಯ ಬಂದಾಗ ಅಲ್ಲಿ ಕಾಯ್ದೆಬಾಹಿರವಾಗಿರತಕ್ಕ ಚಟುವಟಿಕೆಗಳಿಗೆ ಪ್ರೋತ್ಸಾಹಕ್ಕೆ ಅವಕಾಶಗಳು ಸಿಗಬಾರದು. ಈ ವಿಚಾರದಲ್ಲಿ ಕೂಡ ತಾವೇನು ಪ್ರಶ್ನೆ ಎತ್ತಿದ್ದೀರಿ ಇದರ ಬಗ್ಗೆ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಆ ವಿಚಾರದ ಬಗ್ಗೆ ಸರಿಯಾದಂಥ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತಮಿಳರ ಸಮ್ಮೇಳನದಲ್ಲಿ ನಮ್ಮವರಿಗೆ ಹೊಡೆದಿದ್ದಾರೆ.

ಅಧ್ಯಕ್ಷರು : ಇದೇನಿದು? ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ಸರ್ಕಾರ ತಮಿಳು ಸಮ್ಮೇಳನಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮತ್ತು ಗೋವಾ ಕನ್ನಡಿಗರಿಗೆ ರಕ್ಷಣೆ ಕೊಡದಿರುವುದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಕೊಟ್ಟಂಥ ಪ್ರಶ್ನೆ...

ಅಧ್ಯಕ್ಷರು : ನಾನು ಈ ಹತ್ತು ಜನರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ನಾಳೆ ಉಳಿದವರಿಗೆ ಮಾಡಿಕೊಡುತ್ತೇನೆ. ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಇನ್ನೂ ಬಹಳಷ್ಟು ವಿಚಾರಗಳು ಇದೆ. ಇನ್ನು ಗಮನಸೆಳೆಯುವ ಸೂಚನೆಗಳು.

5 ಗಮನಸೆಳೆಯುವ ಸೂಚನೆಗಳು

(ಅ) ಬಿಡಿಎಯಿಂದ ಹಂಚಿಕೆಯಾಗಿರುವ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಬಿಡಿಎಯಿಂದ ಹಂಚಿಕೆಯಾಗಿರುವ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

†**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸರ್.ಎಂ. ವಿಶ್ವೇಶ್ವರಯ್ಯ ನಗರ ಬಡಾವಣೆ ಯೋಜನೆಗಾಗಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಮಸಂದ್ರ, ಸೊಣ್ಣೇನಹಳ್ಳಿ,